ಒ.ಎಸ್. ನಂ.83/2016
ಪಿಡಬ್ಲು-1

ದಿನಾಂಕ 07.03.2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ ಎಂಹೆಚ್ ಡಿ ವಕೀಲರಿಂದ

ಸೋಲಾಪೂರದಲ್ಲಿ 20-ವರ್ಷಗಳಿಂದ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದು ಇಲ್ಲಿಗೆ ಬಂದು ಹೋಗುತ್ತೇನೆ. ನನ್ನ ತಂದೆ ಪೀರಸಾಬ ಮೃತಪಟ್ಟು 11-ವರ್ಷವಾಯಿತು. ಅವರು ನಂದರಗಿಯಲ್ಲಿ ತೀರಿಕೊಂಡಿರುತ್ತಾರೆ. ಸೋಲಾಪೂರದಲ್ಲಿ ಸಕ್ಕರೆ ಕಾರ್ಖಾನೆಯಲ್ಲಿ ಆಪರೇಟರ್ ಆಗಿ ಕೆಲಸ ಮಾಡುತ್ತೇನೆ. ನಾನು ಹುಟ್ಟಿದ ದಿನಾಂಕ ಹೇಳಲಾಗುವುದಿಲ್ಲ. ನನ್ನ ತಂದೆ ಮೃತಪಟ್ಟಾಗ ನನಗೆ 25-26 ವಯಸ್ಸಾಗಿತ್ತು ಆಗ ನನಗೆ ಮದುವೆಯಾಗಿತ್ತು. ದಾವಾ ಸ್ವತ್ತಿನ ಪೂರ್ವಕ್ಕೆ ಮಿಯಾಸಾಬ ರವರ ಹೊಲ ಅವರದು ಸರ್ವೆ ನಂ.11/1 ರಲ್ಲ 6-ಎಕರೆ ಇರುತ್ತದೆ. ಪಶ್ಚಿಮಕ್ಕೆ ಬೌಂಡರಿ ನಂತರ ನಿಂಗಪ್ಪ ಪೂಜಾರಿ ರವರ ಸ್ವತ್ತು ಇದೆ. ಸರ್ವೆ ನಂಬರ ಚೆಕಬಂದಿ ಬರೆದಿಲ್ಲ ಎಂದರೆ ಸರಿ.

ಮಲ್ಲಿಕಾರ್ಜುನ ಚಿತ್ತೂರ ರವರ ಮಗ ನನಗೆ ಗೊತ್ತಿಲ್ಲ. ಮಲ್ಲಿಕಾರ್ಜುನ ಚಿತ್ತೂರ ರವರ ತಂದೆಯ ಹೆಸರು ಗೊತ್ತಿಲ್ಲ. 1 ನೇ ಪ್ರತಿವಾದಿಯ ಗಂಡನ ಹೆಸರು ಗೊತ್ತಿಲ್ಲ. ಅವರ ಕಲಬುರಗಿಯಲ್ಲಿರುತ್ತಾರೆ. ನಮ್ಮ ಊರಿನ ಪಕ್ಕ ತೆಲ್ಲುಣಗಿ ಇದೆ. ಮಲ್ಲಿಕಾರ್ಜುನ ಚಿತ್ತೂರ ರವರು ತೆಲ್ಲೂಣಗಿ ಗ್ರಾಮದವರೆಂದರೆ ಸರಿ. ಅವರ ಮಗ ಶ್ರೀಮಂತರಾವ ಚಿತ್ತೂರ ಎಂದರೆ ಸರಿ. ನನ್ನ ತಂದೆ 1975 ರಲ್ಲಿ ನೊಂದಾಯಿತ ಕ್ರಯ ಪತ್ರದ ಮೂಲಕ 3 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪಹಣಿಯಲ್ಲಿ 3 ನೇ ಪ್ರತಿವಾದಿಯ ಹೆಸರು ನಮೂದಗಿರುತ್ತದೆ ಎಂದರೆ

ಸರಿಯಲ್ಲ. 3 ನೇ ಪ್ರತಿವಾದಿಯವರ ಹೆಂಡತಿ ಹಾಗೂ ಮಗನ ಹೆಸರಿನ ಮೇಲೆ ಸ್ವತ್ತನ್ನು ವರ್ಗಾವಣೆ ಮಾಡಿದ್ದು ದಾವಾ ಸ್ವತ್ತು ಅವರು ಕಬ್ಜೆ ಹಾಗೂ ಮಾಲಿಕತ್ವದಲ್ಲಿದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತನ್ನು ನನ್ನ ತಂದೆ ಮಾರಾಟ ಮಾಡಿರುವುದರಿಂದ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಗೂ ನನಗೂ ಸಂಬಂಧವಿಲ್ಲ ಹಾಗೂ ಕಬ್ಜೆಯಲ್ಲಿಲ್ಲ ಎಂದರೆ ಸರಿಯಲ್ಲ. 1975 ರಿಂದ 3 ನೇ ಪ್ರತಿವಾದಿ ಹಾಗೂ ಅವರ ಹೆಂಡತಿ ಮಕ್ಕಳ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಈಗಲೂ ಸಹ ಪಹಣಿಯಲ್ಲಿ ಅವರ ಹೆಸರಿರುತ್ತದೆ ಎಂದರೆ ಸರಿಯಲ್ಲ. ಪ್ರಾಸಾ-2 ಮತ್ತು 3 ರವರ ಜಮೀನು ಇರುವ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಂದೆ ದಾವಾ ಸ್ವತ್ತನ್ನು ಮಾರಾಟ ಮಾಡಿಲ್ಲ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಆಗಿಬರದವರ ಮಾತು ಕೇಳಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ.
ದಂಡಾಧಿಕಾರಿಗಳ
ಅಫಜಲಪೂರ